"ಸದರಿ ಅರ್ಜೀದಾರನು ತನಗೆ ಸಾಕ್ಷಾತ್ತಾಗಿ ಮೇಲ್ಪಟ್ಟ ಅಧಿಕಾರಿಯ ಮುಂದೆ ಸದರಿ ನಮೂನೆಗೆ ರುಜು ಹಾಕಬೇಕು, ಅಥವಾ ಯಾವದಾದರೂ ವಿಶೇಷ ಕಾರಣದಿಂದ ಹಾಗೆ ರುಜು ಹಾಕುವುದಕ್ಕೆ ಆಗದ ಸಂದರ್ಭದಲ್ಲಿ, ಸರ್ಕಾರದ ಬ್ಯಬ್ಬ ಸೆಕ್ರಿಟರಿಯ ಅಥವಾ ಬ್ಯಬ್ಬ ಡೆಪ್ಯುಟಿ ಕಮಿಷನರ, ಅಥವಾ ಡಿಸ್ಟ್ರಿಕ್ಟ ಜಡ್ಜಿಯ ಮುಂದೆ ರುಜು ಹಾಕಬೇಕು, ಇವರೂ ಕೂಡ ಸದರಿ ನಮೂನೆಯಲ್ಲಿ ಇದಕ್ಕಾಗಿ ವಿಧಿಸಿರುವ ಸರ್ಟಿಫಿಕೇಟಿಗೆ ರುಜು ಹಾಕಬೇಕು."

"ಬೀಮಾ ಮಾಡಲು ಸದರಿ ಅರ್ಜಿದಾರನ ಆರ್ಹತೆಯನ್ನು ಕುರಿತು ಅವನ ಸಾಕ್ಷಾತ್ತಾಗಿ ಮೇಲ್ಪಟ್ಟ ಅಧಿಕಾರಿಯು ತನ್ನ ಅಭಿಪ್ರಾಯವನ್ನು ಗುಟ್ಟಾಗಿ 3ನೆ ನಂಬರ್ ನಮೂನೆಯಲ್ಲಿ ಬರೆದು ಅದನ್ನು ಸ್ಟೇಟ್ ಲೈಫ್ ಇನ್ಷೂರೆನ್ಸ ಕಮಿಟಿಯ ಸೆಕ್ರಿಟರಿಗೆ ವಿಳಾಸ ಖರೆದೆ ಲಕ್ಕೋಟೆಯಲ್ಲಿ ಹಾಕಿ ಮೊಹರು ಮ್ಹಾಡಿ ಸದರಿ ಅರ್ಜಿಗೆ ಲಗತ್ತು ಮಾಡಿ ಕಳುಹಿಸಬೇಕು."

"ತರುವಾಯ, ಸಾಕ್ಷಾತ್ತಾಗಿ ಮೇಲ್ಪಟ್ಟ ಅಧಿಕಾರಿಯು ಸದರೀ ಅರ್ಜಿಯನ್ನು (ಮೊಹರು ಮಾಡಲ್ಪಟ್ಟ ಲಕ್ಕೋಟೆಯೊಂದಿಗೆ) ತಕ್ಕ ವೈದ್ಯಾಧಿಕಾರಿಯ ಬಳಿಗೆ ಕಳುಹಿಸಿ, ಹಾಗೆ ತಾನು ಕಳುಹಿಸಿದ ಸಂಗತಿಯನ್ನು ಸದರಿ ಅರ್ಜಿದಾರನಿಗೆ ತಿಳಿಸಬೇಕು."

ಹುಕುಂ ಬಮೋಜೀಬ್,
ಯು. ಎಲ್. ಮಜುಂದಾರ್,
ಫೈನಾನ್ಷಿಯಲ್ ಸೆಕ್ರಿಟರಿ.

ಮುಜರೈ.

ಇಸ್ತಿಹಾರ್‌ನಾಮೆ.

ತಾರೀಖು 29ನೆ ಆಗಸ್ಟ್ 1907.

ನಂ. 1209, ಇದರಡಿ ಕಂಡವರುಗಳು ಕುಣಿಗಲ್ ತಾಲ್ಲೂಕು ಎಡಿಯೂರಲ್ಲಿರುವ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಯವರ ದೇವಸ್ಥಾನದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಗೆ ಧರ್ಮದರ್ಶಿಗಳಾಗಿ ಮೊಕರರು ಮಾಡಲ್ಪಟ್ಟಿರುತ್ತಾರೆ.

1. ಮು॥ ರಾ॥ ರಾ॥ ಪಟೇಲ್ ಚನ್ನಮುದ್ದೆ ಗೌಡರು.
2. ,, ಮೊದಲ ಮುನಿಷಿ ನಂಜುಂಡಯ್ಯನವರು.
3. ,, ಶ್ಯಾನುಭೋಗ ವರದಯ್ಯಂಗಾರ್ರು.

ಹುಕುಂ ಬಮೋಜೀಬ್,
ಎಲ್ ಆನಂತಸ್ವಾಮಿರಾವ್,
ಮುಜರೈ ಸೆಕ್ರಿಟರಿ.